ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್ ಬೋಜೇಗೌಡ ಹಾಗೂ ಶ್ರೀ ಮರಿತಿಬ್ಬೇಗೌಡ ರವರುಗಳು ನಿಯಮ 72ರ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.

## ಪ್ರಶ್ನೆ

ಸರ್ಕಾರಿ / ಅನುದಾನಿತ ಪ್ರೌಢಶಾಲೆಯ ಸಹ ಶಿಕ್ಷಕರಾಗಿ ದಿನಾಂಕ:01/08/2008ರ ನಂತರ ನೇರ ನೇಮಕಾತಿ ಮೂಲಕ ಆಯ್ಕೆಯಾಗಿ, ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ರೂ.400/- ವಿಶೇಷ ಭತ್ಯೆಯನ್ನು ಮಂಜೂರು ಮಾಡಿ, 6ನೇ ವೇತನ ಆಯೋಗದ ಶಿಫಾರಸ್ಸಿನ್ವಯ ದಿನಾಂಕ:01/04/2018 ರಿಂದ ಒಂದು ವಿಶೇಷ ವಾರ್ಷಿಕ ಬಡ್ತಿಯನ್ನು ನೀಡುವಂತೆ ನ್ಯಾಯಾಲಯದ ನಿರ್ದೇಶನವಿದ್ದರೂ ಮಂಜೂರು ಮಾಡದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಗಮನ ಸೆಳೆಯಬಯಸುತ್ತೇನೆ.

## ಉತ್ತರ

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 4412-4428, 4430-4444, 4446-4464, 4467-5224/2020, ಶ್ರೀ ಲಕ್ಷ್ಮೀ ನಾರಾಯಣಭಟ್ ಮತ್ತು 2514-2674/2020-2021, ಶ್ರೀಮತಿ ಶೋಭಾ ಹಾಗೂ 417-540/2022, ಶ್ರೀ ಮಧುಚಂದ್ರ.ಬಿ., ಈ ಆದೇಶ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು W.P. No.6902/2022 533-1341/2021, 25909/2022 ಮತ್ತು ಇತರರು ಪ್ರಕರಣಕ್ಕೆ ಸಂಬಂಧಿಸಿದಂತೆ, ಆರ್ಥಿಕ ಇಲಾಖೆಯ ದಿನಾಂಕ:05/12/2023, ಆಇ 18 ಎಸ್‌ಆರ್‌ಪಿ 2023 ರಂದು ಹೊರಡಿಸಿರುವ ಆದೇಶದಲ್ಲಿ 2007-2008ರ ಅಧಿಸೂಚನೆ / ಜ್ಞಾಪನದನ್ವಯ ದಿನಾಂಕ:01/08/2008ಕ್ಕೂ ನಿಕಟ ಪೂರ್ವದಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡು ಪ್ರಕಟಗೊಂಡ ಆಯ್ಕೆ ಪಟ್ಟಿಯಲ್ಲಿನ ಶಿಕ್ಷಕರುಗಳಿಗೆ ದಿನಾಂಕ:12/05/2006ರ ಸರ್ಕಾರಿ ಆದೇಶ ಸಂಖ್ಯೆ: ಆಇ 14 ಎಸ್‌ಆರ್‌ಪಿ 2006ರಲ್ಲಿ ಮಾಡಲಾದ ವಿಶೇಷ ಭತ್ಯೆಯನ್ನು ಆಯ್ಕೆ ಪಟ್ಟಿಯಲ್ಲಿರುವ ಶಿಕ್ಷಕರುಗಳಿಗೆ ಸೀಮಿತವಾದಂತೆ ವಿಶೇಷ ಭತ್ಯೆಯನ್ನು ಮಂಜೂರು ಮಾಡಿ ಆದೇಶಿಸಿದೆ.

ಆದ್ದರಿಂದ ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಆಇ 18 ಎಸ್‌ಆರ್‌ಪಿ 2023, ದಿನಾಂಕ: 05-12-2023ರಂದು ಹೊರಡಿಸಿರುವ ಆದೇಶವು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾಗಿರುವ ನಿಂದನಾ ಅರ್ಜಿ ಸಂಖ್ಯೆ:1341/2021, ಶ್ರೀ ಲಕ್ಷ್ಮೀನಾರಾಯಣ ಭಟ್, ಶ್ರೀಮತಿ ಶೋಭಾ, ಹಾಗೂ ಶ್ರೀ ಮಧುಚಂದ್ರ ಇವರ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ನ್ಯಾಯಾಲಯದ ಮೊರೆ ಹೋಗಿರುವವರಿಗೆ ಮಾತ್ರ ಅನ್ವಯಿಸುತ್ತದೆ ಹಾಗೂ ದಿನಾಂಕ:01/08/2008ರ ನಂತರ ನೇಮಕಾತಿ ಹೊಂದಿರುವವರು ವಿಶೇಷ ಭತ್ಯೆಯನ್ನು ಪಡೆಯಲು ಅರ್ಹರಿರುವುದಿಲ್ಲವೆಂದು ತಿಳಿಸಲಾಗಿದೆ.

**ಇಪಿ 37 ಎಸ್‌ಎಲ್‌ಬಿ 2024**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**